# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ

**ಸೂಚನೆ:**

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ರಾಗಿ ಬೆಳೆಯು ಕಟಾವಿಗೆ ಬಂದಿದ್ದು, ಈ ರಾಗಿ ಹುಲ್ಲು ಭತ್ತದ ಮತ್ತು ಇತರೆ ಹುಲ್ಲಿಗಿಂತ ಹೆಚ್ಚು ಪೌಷ್ಠಿಕಾಂಶಗಳನ್ನು ಹೊಂದಿರುತ್ತದೆ. ಸರ್ಕಾರವು ಪ್ರತಿ ತಾಲ್ಲೂಕು ಮಟ್ಟದಲ್ಲಿ ತಲಾ ಒಂದು ಸರ್ಕಾರಿ ಗೋಶಾಲೆಯನ್ನು ನಿರ್ಮಿಸಿ ಪ್ರಾರಂಭಿಸಿರುವುದರಿಂದ, ಸ್ಥಳಿಯವಾಗಿ ಈ ರಾಗಿ ಹುಲ್ಲನ್ನು ಖರೀದಿಸಿ ಗೋಶಾಲೆಗಳಲ್ಲಿ ವಿದೇಶಗಳಲ್ಲಿ ಸಂಸ್ಕರಿಸಿ ರಕ್ಷಣೆ ಮಾಡುವ (ಸೈಲೇಜ್) ರೀತಿಯಲ್ಲಿ ಶೇಖರಣೆ ಮಾಡುವಂತೆ, ಇಲ್ಲಿಯೂ ಸಹಾ ಶೇಖರಣೆ ಮಾಡಲು ಹಾಗೂ ಕಳೆದ 2 ತಿಂಗಳುಗಳಿಂದ ಜಾನುವಾರು ಫೀಡ್ ದರವನ್ನು ಪ್ರತಿ ಅರ್ಧ ಕ್ವಿಂಟಾಲ್‌ಗೆ ರೂ.240/- ಗಳನ್ನು ಖಾಸಗಿ ಫೀಡ್ ತಯಾರಕರುಗಳು ಏರಿಕೆ ಮಾಡಿದ್ದು, ಸರ್ಕಾರವು ಪ್ರತಿ ಲೀಟರ್ ಹಾಲಿಗೆ ರೂ.2/- ಗಳನ್ನು ಹೆಚ್ಚಿಸಿದ್ದರೂ ಸಹಾ ಹೆಚ್ಚಿನ ಫೀಡ್ ದರಗಳಿಂದಾಗಿ ಹೈನೋದ್ಯಮದಲ್ಲಿ ತೊಡಗಿರುವ ರೈತರುಗಳಿಗೆ ಲಾಭಾಂಶವಿಲ್ಲದೇ ತೊಂದರೆಯಾಗಿರುತ್ತದೆ. ಈ ರೀತಿ ಫೀಡ್ ತಯಾರಕರು ಸರ್ಕಾರದ ಗಮನಕ್ಕೆ ತಾರದೆಯೇ ಫೀಡ್ ದರಗಳನ್ನು ಏರಿಕೆ ಮಾಡಿ, ರೈತರುಗಳಿಗೆ ತೊಂದರೆ ಉಂಟಾಗಲು ಕಾರಣರಾದವರ ಕುರಿತು ಸರ್ಕಾರವು ಯಾವ ರೀತಿ ಕ್ರಮಗಳನ್ನು ಕೈಗೊಂಡಿಲ್ಲ. ಆದಕಾರಣ ಸರ್ಕಾರ ಈ ಕೂಡಲೇ ಹಾಗೂ ರೈತರ ಹಿತದೃಷ್ಟಿಯಿಂದ ಫೀಡ್ ದರಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕಾಗಿರುವ ವಿಷಯದ ಕುರಿತು.

**ಹೇಳಿಕೆ:**

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಸೇರಿದಂತೆ ರಾಜ್ಯದ ಇತರೆ ಜಿಲ್ಲೆಗಳಲ್ಲಿ ರಾಗಿ ಬೆಳೆಬೆಳೆದು ಕಟಾವಿನ ನಂತರ ಒಣ ಮೇವಾಗಿ ಜಾನುವಾರುಗಳಿಗೆ ಉಪಯೋಗಿಸುವುದು ರೂಢಿಯಲ್ಲಿರುತ್ತದೆ. ರಾಗಿ ಹುಲ್ಲನ್ನು ಸಂಸ್ಕರಿಸಿ ಸೈಲೇಜ್ ಮಾಡಿ ಶೇಕರಣೆ ಮಾಡುವ ಪದ್ಧತಿ ವೈಜ್ಞಾನಿಕವಾಗಿ ಸೂಕ್ತವಾಗಿಲ್ಲದ ಕಾರಣ ಆ ಪದ್ಧತಿ ಜಾರಿಯಲ್ಲಿಇರುವುದಿಲ್ಲ. ರಾಗಿ ಹುಲ್ಲನ್ನು ರೈತರು ರಾಸುಗಳಿಗೆ ಒಣಮೇವಾಗಿ ಬಳಸುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಿದ್ದಲ್ಲಿ ಅಗತ್ಯವಿರುವ ರೈತರಿಗೆ ಸ್ಥಳೀಯ ಮಾರುಕಟ್ಟೆ ಮಾರಾಟ ದರದಂತೆ ಮಾರಾಟ ಮಾಡುವುದು ವಾಡಿಕೆಯಲ್ಲಿರುತ್ತದೆ. ಸರ್ಕಾರಿ ಗೋಶಾಲೆಗಳಿಗೆ ಮೇವಿನ ಅಗತ್ಯವಿದ್ದಲ್ಲಿ ಜಿಲ್ಲಾ SPCA ಸಂಸ್ಥೆಯವರು ತಮ್ಮ ಅಗತ್ಯತೆಗೆ ತಕ್ಕಂತೆ ಖರೀದಿಸುವ ನಿರ್ಧಾರವನ್ನು ಸಂಬಂಧಿಸಿದ ಜಿಲ್ಲಾ SPCA ಸಮಿತಿಯವರು ಕೈಗೊಳ್ಳುತ್ತಾರೆ.

ಕರ್ನಾಟಕ ಕುಕ್ಕುಟ ಮತ್ತು ಜಾನುವಾರು ಆಹಾರ (ತಯಾರಿಕೆ ಮತ್ತು ಮಾರಾಟ ನಿಯಂತ್ರಣ) ಆದೇಶ 1987 ರ ಪ್ರಕಾರ ಜಾನುವಾರು ಆಹಾರ ಉತ್ಪಾದನೆ ಮತ್ತು ಮಾರಾಟ ಪರವಾನಿಗೆ ನೀಡಲು ಅವಕಾಶವಿರುತ್ತದೆ. ಅದರಂತೆ ಗುಣಮಟ್ಟದ ಪಶು ಆಹಾರ ಉತ್ಪಾದನೆಗೆ ಆಸಕ್ತರಿರುವ ಉತ್ಪಾದಕರು ಮತ್ತು ಮಾರಾಟದಾರರಿಗೆ ಲೈಸೆನ್ಸ್ ನೀಡುವ ಪದ್ಧತಿ ಜಾರಿಯಲ್ಲಿರುತ್ತದೆ, ಪಶು ಆಹಾರ ದರವನ್ನು ಸರ್ಕಾರದ ವತಿಯಿಂದ ನಿಯಂತ್ರಿಸುವ ಪ್ರಕ್ರಿಯೆ ಜಾರಿಯಲ್ಲಿರುವುದಿಲ್ಲ. ಬೇಡಿಕೆ, ಉತ್ಪಾದನೆ ಹಾಗೂ ಸರಬರಾಜಿಗೆ ಅನುಗುಣವಾಗಿ ಜಾನುವಾರು ಆಹಾರ ದರದಲ್ಲಿ ಏರಿಳಿಕೆ ಕಂಡು ಬರುವುದು ವಾಡಿಕೆಯಲ್ಲಿರುತ್ತದೆ.

ಪಶು ಆಹಾರ ತಯಾರಿಕೆಗೆ ಬೇಕಾಗುವ ಮೆಕ್ಕೆಜೋಳ ಸೋಯಾ, ಜೋಳಹತ್ತಿ ಕಾಳು ಭತ್ತದ ತೌಡು ಇತ್ಯಾದಿಗಳ ಬೆಲೆ ನಿಯಂತ್ರಣವು ಪಶುಪಾಲನಾ ಇಲಾಖಾ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಈ ಸಂಬಂಧ ಕೃಷಿ ಸಚಿವರು ಮತ್ತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಕ್ರಮವಹಿಸಲಾಗುವುದು.

**ಇ–ಪಸಂಮೀ 337 ಸಲೆವಿ 2022**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು